

ಕ್ಷೇತ್ರದಲ್ಲಿ ಕಿರಿಯಳು ಎಂದು ಭಾವಿಸಿದ್ದ ದಿನಗಳಲ್ಲಿ ಕವಿಗೋಷ್ಠಿಯಲ್ಲಿ ಭಾಗವಹಿಸುವುದೇ ಬಹಳ ಘನತರ ವಿಷಯವಾಗಿತ್ತು. ಯಾವತ್ತಿದ್ದರೂ ಕವಿಗೋಷ್ಠಿಗೆ ತನ್ನದೇ ಆದ ಘನತೆ ಗೌರವ ಇದ್ದೇ ಇದೆ. ಆದರೆ ಸಮಸ್ಯೆ ಅದೆಲ್ಲಿಂದ ಪ್ರಾರಂಭವಾಯ್ತೆನ್ನುವುದನ್ನು ನನ್ನಿಂದಲೂ ನಿಖರವಾಗಿ ಗುರುತಿಸಲಾಗುತ್ತಿಲ್ಲ ಬಿಡಿ. ಲ್ಯಾಂಡ್ ಲೈನಿನ ಆ ಜಮಾನದಲ್ಲಿಯೇ ಮೊದಲೇ ಫೋನ್ ಮಾಡಿ, ಒಪ್ಪಿಗೆ ತೆಗೆದುಕೊಂಡು, ಆಹ್ವಾನ ಪತ್ರಿಕೆಯಲ್ಲಿ ನಮ್ಮ ಹೆಸರನ್ನು ಹಾಕಿ, ಕಾರ್ಯಕ್ರಮದ ಹಿಂದಿನ ದಿನ ಮತ್ತೊಮ್ಮೆ ಲ್ಯಾಂಡ್ ಫೋನಿನಿಂದಲೇ ನೆನಪಿಸಿ...